# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕರ ಮಾಹಿತಿಗಾಗಿ

ದಿನಾಂಕ : 09–02–2015

ಪ್ರಿಯ ನಾಗರೀಕ ಬಂಧುಗಳೇ,

ಮನೆ/ವಾಣಿಜ್ಯ ಮಳಿಗೆ/ಕೈಗಾರಿಕೆಗಳಲ್ಲಿ ಘನತ್ಯಾಜ್ಯ ವಸ್ತುಗಳ ಬೇರ್ಪಡಿಸುವಿಕೆ ಆಂದೋಲನದಲ್ಲಿ ಭಾಗಿಯಾಗಿರಿ ನಗರದ ಕಸ ಸಮಸ್ಯೆ ನಿವಾರಣೆಯಲ್ಲಿ ಪಾಲ್ಗೊಳ್ಳಿರಿ.

ಮೂಲದಲ್ಲಿಯೇ ತ್ಯಾಜ್ಯ ಬೇರ್ಪಡಿಸುವಿಕೆಯಿಂದ ಲಾಭ ಪಡೆದುಕೊಳ್ಳಿ

ಒಣ ತ್ಯಾಜ್ಯವನ್ನು ಪಾಲಿಕೆ ವತಿಯಿಂದ ನಿರ್ಮಿಸಲಾದ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರದಲ್ಲಿ ಆಕರ್ಷಕ ಬೆಲೆಯಲ್ಲಿ ಮಾರಾಟ ಮಾಡಿ ಲಾಭ ಪಡೆದುಕೊಳ್ಳಬಹುದಾಗಿರುತ್ತದೆ.

ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಪಾಲಿಕೆಯ ಬಹುತೇಕ ಎಲ್ಲಾ ವಾರ್ಡಗಳಲ್ಲಿ ನಿರ್ಮಿಸಲಾಗಿದ್ದು, ವಿಳಾಸ ಮತ್ತು ಸಂಪರ್ಕ ಸಂಖ್ಯೆಯನ್ನು ಪಾಲಿಕೆಯ ವೆಬ್ ಸೈಟ್ : **www.bbmp.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ವಿವಿಧ ಬಗೆಯ ಒಣ ತ್ಯಾಜ್ಯಕ್ಕೆ ಕೇಂದ್ರಗಳ ನಿರ್ವಹಣೆದಾರರು ನಿಗದಿಪಡಿಸಿಕೊಂಡ ದರಗಳನ್ನು ಪಡೆಯಬಹುದಾಗಿರುತ್ತದೆ. ವಿವಿಧ ಒಣ ತ್ಯಾಜ್ಯದ ಅಂದಾಜು ದರಗಳು ಈ ಕೆಳಕಂಡತ್ತಿರುತ್ತವೆ. (ಸದರಿ ದರಗಳು ಮಾರುಕಟ್ಟೆ ಆಧಾರಿತವಾಗಿದ್ದು, ಬದಲಾಗುವ ಸಾಧ್ಯತೆಗಳಿವೆ.)







ಕರ್ನಾಟಕ ನಗರ ಪಾಲಿಕೆಗಳ ಕಾಯ್ದೆ 1976 ಕಲಂ 256 ಮತ್ತು 260 ರಲ್ಲಿರುವ ಅಧಿಕಾರದಂತೆ ಮಾನ್ಯ ಆಯುಕ್ತರು, ಬಿಬಿಎಂಪಿ ಇವರು ದಿನಾಂಕ 01–10–2012 ರಿಂದ ಜಾರಿಗೆ ಬರುವಂತೆ ಘನ ತ್ಯಾಜ್ಯ ವಸ್ತುಗಳನ್ನು ಮೂಲದಲ್ಲೇ ಬೇರ್ಪಡಿಸಿ ಸಂಗ್ರಹಿಸಿ, ವಿಲೇವಾರಿ ಮಾಡಲು ಅಧಿಸೂಚನೆ ಹೊರಡಿಸಿದ್ದಾರೆ. ಅದರಂತೆ ಕಸವನ್ನು ಎಲ್ಲಾ ಮನೆಗಳಲ್ಲಿ ವಾಣಿಜ್ಯ ಮಳಿಗೆಗಳಲ್ಲಿ, ಕೈಗಾರಿಕೆಗಳಲ್ಲಿ ಮೂಲದಲ್ಲೆ ಹಸಿತ್ಯಾಜ್ಯ ಮತ್ತು ಒಣ ತ್ಯಾಜ್ಯಗಳಾಗಿ ವಿಂಗಡಿಸುವುದು ಕಡ್ಡಾಯವಾಗಿದ್ದು, ಇದನ್ನು ಗೌರವಾನ್ವಿತ ಉಚ್ಚನ್ಯಾಯಾಲಯವು ಸಹ ಸಮರ್ಥಿಸಿದೆ. ಈ ಉದ್ದೇಶಕ್ಕಾಗಿ ಸಾರ್ವಜನಿಕರು ತಮ್ಮ ಮನೆ, ವಾಣಿಜ್ಯ ಮಳಿಗೆ ಹಾಗೂ ಕೈಗಾರಿಕೆಗಳಿಂದ ಉತ್ಪತ್ತಿಯಾದ ಪುರ ಘನ ತ್ಯಾಜ್ಯವನ್ನು ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯವೆಂದು 2 ಭಾಗಗಳಾಗಿ ತಪ್ಪದೇ ಬೇರ್ಪಡಿಸಿ ಸಂಗ್ರಹಿಸಿ ಕಸ ಸಂಗ್ರಹಣೆದಾರರಿಗೆ ನೀಡಲು ತಿಳಿಸಿದೆ.

ಸಾರ್ವಜನಿಕ ಬಂಧುಗಳೇ, ಇಂದೇ ನಿಮ್ಮ ಮನೆಗಳಿಂದಲೇ ಆರಂಭಿಸಿ! ಕಸದ ವಿಂಗಡಣೆ ಹಾಗು ವಿಲೇವಾರಿಗಾಗಿ ಸರಿಯಾದ ವಿಧಾನವನ್ನು ಬಳಸಿ ನಿಮ್ಮ ಕುಟುಂಬದ ಎಲ್ಲಾ ಸದಸ್ಯರಿಗೂ ಹಾಗು ಮನೆಕೆಲಸದವರಿಗೂ ಇದನ್ನು ವಿವರಿಸಿ

*ಬನ್ನಿ, ಪಾಲಿಕೆ ಜೊತೆಗೆ ಕೈಜೋಡಿಸಿ ನಗರವನ್ನು ಸ್ವಚ್ಛವಾಗಿಡಲು ಸಹಕರಿಸಿ*

"ನಗರದ ಸ್ವಚ್ಛತೆ ನಮ್ಮೆಲ್ಲರ ಹೊಣೆ"

| | | |
|---|---|---|
| ಶ್ರೀ ನಾರಾಯಣ ಹೆಚ್.<br>ಅಧ್ಯಕ್ಷರು, ಆರೋಗ್ಯ ಸ್ಥಾಯಿ ಸಮಿತಿ | ಶ್ರೀ ಕೆ. ರಂಗಣ್ಣ<br>ಉಪ ಮಹಾಪೌರರು | ಶ್ರೀಮತಿ ಎನ್. ಶಾಂತಕುಮಾರಿ<br>ಪೂಜ್ಯ ಮಹಾಪೌರರು |
| ಡಾ. ಕೆ.ಸಿ.ಯತೀಶ್‌ಕುಮಾರ ಕೆ.ಸಿ.ಎಸ್<br>ಜಂಟಿ ಆಯುಕ್ತರು (ಆರೋಗ್ಯ ಮತ್ತು ಘತ್ಯಾನಿ) | ಶ್ರೀ ದರ್ಪನ್ ಜೈನ್ ಐ.ಎ.ಎಸ್<br>ವಿಶೇಷ ಆಯುಕ್ತರು (ಘತ್ಯಾನಿ) | ಶ್ರೀ ಎಂ. ಲಕ್ಷ್ಮಿನಾರಾಯಣ ಐ.ಎ.ಎಸ್<br>ಆಯುಕ್ತರು |